## ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಂ., ನ್ಯಾಯಾಲಯ, ಶೃಂಗೇರಿ

**ಸಿ.ಸಿ. ನಂಃ 92/2022**

**ದಿನಾಂಕ ಃ 18-06-2024 ರಂದು ಆದ ಮಧ್ಯಂತರ ಅರ್ಜಿಯಆದೇಶದ ಮೇರೆಗೆ ಸಾಕ್ಷಿಯನ್ನು ದಿಃ 20-06-2024 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರ ಶ್ರೀ.ಕೆ ಆರ್ ಎಸ್ ವಕೀಲರಿಂದ ಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ವಿಷಯಗಳು ಸರಿಯಾಗಿದ್ದು, ನಾನೇ ಓದಿ ತಿಳಿದು ಸಹಿ ಮಾಡಿರುತ್ತೇನೆ.

ಸದರಿ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ಹೆಚ್ಚುವರಿ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ, ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

| ಕ್ರಮ ಸಂಖ್ಯೆಃ | ದಾಖಲೆಗಳು | ನಿಶಾನೆಗಳು |
|---|---|---|
| 1 | ಈ ನ್ಯಾಯಾಲಯದ ಸಿ ಸಿ ಸಂಖ್ಯೆ 93/2022 ಗೆ ಸಂಬಂಧ ಪಟ್ಟ ಚೆಕ್, ಬ್ಯಾಂಕಿನ ಹಿಂಬರಹ, ತಿಳುವಳಿಕೆ ನೋಟೀಸು, ಅಂಚೆ ರಸೀದಿ ಮತ್ತು ಅಂಚೆ ಸ್ವೀಕೃತಿಗಳ ಧೃಢೀಕೃತ ನಕಲುಗಳನ್ನು (6 ಪುಟಗಳು) ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ | ನಿಪಿ-7 |
| 2 | ವಿದ್ಯಾರಣ್ಯಪುರ ಗ್ರಾ.ಪಂ. ಯವರು ನನಗೆ ನೀಡಿದ್ದಂತಹ ವ್ಯಾಪಾರೋದ್ಯಮ ಪರವಾನಗಿಯನ್ನು ನೋಡಿ ಗುರುತಿಸಿದ್ದು, ಅದನ್ನು | ನಿಪಿ-8 |

| | | |
|---|---|---|
| 3 | ನಾನು ಏಪ್ರಿಲ್ 2019 ರಿಂದ ಮಾರ್ಚ್ -2022 ರ ವರೆಗಿನ ನನ್ನ ವ್ಯವಹಾರಕ್ಕೆ ಸಂಬಂಧಿಸಿದ ಜಿ ಎಸ್ ಟಿ ಮಾಸಿಕ ರಿಟರ್ನ್ಸ್ ಗಳನ್ನು (37 ಹಾಳೆ) ಹಾಜರು ಪಡಿಸಿರುತ್ತೇನೆ. ( ಆರೋಪಿ ಪರ ವಕೀಲರು ಸದರಿ ದಾಖಲೆಗಳಲ್ಲಿ ಯಾವುದೇ ಸಹಿ, ಡಿಜಿಟಲ್ ಸಹಿ ಅಥವಾ ಕಂಪ್ಯೂಟರ್ ಜನರೇಟೆಡ್ ರಿಪೋರ್ಟ್ Signature Not required ಎನ್ನುವ ಶರಾ ಸಹ ಇಲ್ಲದೇ ಇರುವ ಕಾರಣ ಅವುಗಳನ್ನು ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ ಎಂದು ತಕರಾರು ಮಾಡಿದ್ದು, ಸದರಿ ದಾಖಲೆಗಳನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ) ಒಟ್ಟಾಗಿ | ನಿಪಿ-9 |
| 4 | ನನ್ನ ಮತ್ತು ಆರೋಪಿಯ ನಡುವೆ ಆದ ವ್ಯವಹಾರದ ಬಗ್ಗೆ ನಾನು ಒಂದು ಡೈರಿಯಲ್ಲಿ ನಮೂದಿಸಿದ್ದು, ಸದರಿ ಡೈರಿಯನ್ನು ಈಗ ನೋಡಿ ಗುರುತಿಸಿದ್ದು, ಅದನ್ನು | ನಿಪಿ-10 |
| 5 | ನಿಪಿ-10 ಡೈರಿಯಲ್ಲಿ ಆರೋಪಿಯ ಜೊತೆ ಆದ ವ್ಯವಹಾರದ ಕುರಿತು ನಾನು ಬರೆದಿಟ್ಟಿರುವ 11 ಪುಟಗಳನ್ನು ಪ್ರತ್ಯೇಕವಾಗಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ | ನಿಪಿ-10(ಎ) ರಿಂದ ನಿಪಿ-10(ಕೆ) |

ಆದ್ದರಿಂದ ಆರೋಪಿ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕಾಗಿ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ.

**<u>ಪಾಟೀಸವಾಲು ಆರೋಪಿ ಪರ ಶ್ರೀ. ಕೆ ಸಿ ಸಿ ವಕೀಲರಿಂದಃ</u>**

(ಪಾಟೀ ಸವಾಲಿಗೆ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು. )

**(ದಿನಾಂಕಃ 20-06-2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಸಹಿ/-**

**ಪ್ರ.ದ.ನ್ಯಾ.ದಂ., ಶೃಂಗೇರಿ**